# 1

# ದೇವರು ಮನುಷ್ಯ ಕುಲ, ಹಾಗು ಪಾಪ

## (ಆದಿಕಾಂಡ 1-3)

ಸತ್ಯವೇದದ ಮುಂದಿನ ಅಂಶಗಳನ್ನು ಅರಿಯಲು, ಸತ್ಯವೇದದಲ್ಲಿನ ಆದಿಕಾಂಡದಲ್ಲಿನ ಪ್ರಥಮ ಮೂರು ಅಧ್ಯಾಯಗಳು ನಮಗೆ ಸಹಾಯಿಸುತ್ತವೆ. "ಆದಿಕಾಂಡ" ಅಂದರೆ "ಆರಂಭ" ಎಂಬ ಅರ್ಥವಿದೆ. ಅಸ್ತಿತ್ವದಲ್ಲಿರುವ ಸಕಲ ಸಂಗತಿಗಳ ಮೂಲವನ್ನು ಆದಿಕಾಂಡ ತಿಳಿಸುತ್ತದೆ. ಲೋಕದ ಸೃಷ್ಠಿ, ಜೀವಿತ, ಹಾಗೂ ಪಾಪ ಮರಣಗಳ ಮೂಲವನ್ನು ತಿಳಿಸುತ್ತದೆ. ಆದಿಕಾಂಡದ ನಂತರ ಬರೆದ ಇತರೆ ವಿಷಯಗಳನ್ನು ಅರಿಯಲು ಆದಿಕಾಂಡವು ಬುನಾದಿಯನ್ನು ಹೊಂದಿರುತ್ತದೆ. ಆದ್ದರಿಂದ ಆದಿಕಾಂಡ 1-3 ಅಧ್ಯಾಯಗಳು ಸತ್ಯವಾದ ಪ್ರಮುಖ ವಾಕ್ಯಭಾಗವಾಗಿದೆ.

### ದೇವರು

ಸತ್ಯವೇದದ ಸಾರಾಂಶವೇನು? ಎಂದು ಯಾರಾದರು ಪ್ರಶ್ನಿಸಿದರೆ, ನಾವುಗಳು "ದೇವರು" ಎಂಬ ಉತ್ತರವನ್ನು ಮಾತ್ರ ನೀಡಬಹುದು. ಆದಿಕಾಂಡದ ಪ್ರಥಮ ವಾಕ್ಯದಿಂದ, ಪ್ರಕಟನೆಯ ಕಡೇಯ ವಚನದವರೆಗೆ, ದೇವರ ಕುರಿತಾಗಿಯೇ ಬರೆಯಲ್ಪಟ್ಟಿದೆ. ಸತ್ಯ ವೇದವು ಮುಂದುವರಿದು ಮಾನವ ಕುಲದ ಬಗ್ಗೆಯೂ, ಅಂದರೆ ಪಾಪದೊಂದಿಗೆ ಮಾನವನು ಹೊಂದಿರುವ ಹೋರಾಟ ಮತ್ತು ಅದರಿಂದ ಉಂಟಾಗುವ ವಿಮೋಚನೆಯ ಬಗ್ಗೆಯೂ ತಿಳಿಸುತ್ತದೆ - ಆದರೆ ನಮ್ಮ ಕುರಿತ ಪ್ರಮುಖ ಅಂಶವಾಗಿರದೇ-ದೇವರ ಕುರಿತಾಗಿಯೇ ಆಗಿರುತ್ತದೆ.

"ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" (ಆದಿಕಾಂಡ 1:1). ಸತ್ಯವೇದವು ಆರಂಭದಲ್ಲಿಯೇ ದೇವರ ಇರುವಿಕೆಯ ಗುರುತರ ಅಂಶವನ್ನು ಸ್ಪಷ್ಟಪಡಿಸುತ್ತದೆ, ದೇವರ ಕುರಿತ ಚರ್ಚೆಗಾಗಲೀ, ವಾಗ್ವಾದಕ್ಕಾಗಲೀ ಎಡೆ ಮಾಡಿಕೊಟ್ಟಿರುವದಿಲ್ಲ. ಏಕೆಂದರೆ? ದೇವರ ಅಸ್ತಿತ್ವವೇ ಅದಕ್ಕೆ ಸಾಕ್ಷಿಯಾಗಿರುತ್ತದೆ. ಸೃಷ್ಟಿ ಇರುವದಾದರೆ, ಸೃಷ್ಟಿಕರ್ತ ಇರಲೇಬೇಕು. ಒಂದು ಸುಂದರವಾದ ಹಾಗೂ ಮಹತ್ವದ ಪುಸ್ತಕವನ್ನು ನಾವು ನೋಡುವಾಗ, ಅದು ಒಂದು ಮುದ್ರಿಸುವ ಅಂಗಡಿಯಲ್ಲಿ, ಶಾಯಿಯ ಕಾರ್ಖಾನೆಯಲ್ಲಿ ಸ್ವಾಭಾವಿಕವಾಗಿ ಪುಸ್ತಕವಾಯಿತು ಎಂದು ಆಲೋಚಿಸುವದಿಲ್ಲ. ಅದರ ಬದಲಾಗಿ, ಒಬ್ಬರಿಗಿಂತ ಅಧಿಕ ಜನರು ಅದನ್ನು ಬರೆದು, ಯೋಜಿಸಿ ಮುದ್ರಿಸಿ, ಒಂದು ಪುಸ್ತಕವಾಗಿ ಮಾಡಿರುವರು ಎಂದು ಊಹಿಸುತ್ತೇವೆ. ಇದು ಒಂದು ಯಥಾರ್ಥವಾದ ನಿರ್ಣಯವಾಗಿರುತ್ತದೆ. ಸುಂದರವಾಗಿ ರೂಪುಗೊಂಡಿರುವ ಸೃಷ್ಠಿಯ ಲೋಕವನ್ನು ಗಮನಿಸಿ, ಕಾರಣವಿಲ್ಲದೆ ಒಬ್ಬನು ಅದನ್ನು ನಿರ್ಮಾಣ ಮಾಡಿರುವದಿಲ್ಲ ಎಂಬ ನಿರ್ಣಯವು ಉಂಟಾಗುತ್ತದೆ.

"ಒಂದು ವೇಳೆ ದೇವರು ಇಲ್ಲದೆಇದ್ದರೆ, ಇವೆಲ್ಲವು ಎಲ್ಲಿಂದ ಬಂದವು?" ಎಂಬ ಪ್ರಶ್ನೆಗೆ ನಾಸ್ತಿಕರು ಉತ್ತರ ನೀಡಲು ಸಾಧ್ಯವಿಲ್ಲ ಸ್ವಾಭಾವಿಕವಾಗಿ ಉದ್ಭವವಾಗಿರುವ ವಸ್ತುಗಳಿಗೆ ಅಗತ್ಯವಿರುವ "ಕಚ್ಚಾಸಾಮಾಗ್ರಿಗಳು" ಎಲ್ಲಿಂದ ಬಂದವು ಎಂಬುದಕ್ಕೆ ಉತ್ತರವಿರುವದಿಲ್ಲ. ಏನೂ ಇಲ್ಲದ್ದರಿಂದ, ಏನೂ ಉಂಟಾಗುವದಿಲ್ಲ. ಹಾಗಾದರೆ, ನಾವು ಗಮನಿಸುವ ಸಕಲ ಸಂಗತಿಗಳಿಗೆ "ಆರಂಭವು" ಇರಲೇಬೇಕು.

ಕೀರ್ತನೆ 14:1 ರಲ್ಲಿ, ದುರ್ಮತಿಗಳು - ದೇವರಿಲ್ಲವೆಂದು ಮನಸ್ಸಿನಲ್ಲಿ ಅಂದುಕೊಳ್ಳುತ್ತಾರೆ. ಆದ್ದರಿಂದ, ನಾಸ್ತಿಕರಾದವರು ಆದಿಕಾಂಡದ ಸಾರಾಂಶವನ್ನು ಅರಿಯಲು ಇಚ್ಛಿಸದೆ ಇರಬಹುದು, ಆದರೆ ಸತ್ಯವೇದವು ದೇವರ ಇರುವಿಕೆಯ ಬಗೆಗೆ ಅವರೊಂದಿಗೆ ಚರ್ಚೆಮಾಡುವ ಮೂಲಕ ಆರಂಭ ಮಾಡುವದಿಲ್ಲ.

ಭೂಮಂಡಲದ ಆರಂಭದ ಬಗ್ಗೆ ಪೂರ್ವಿಕರ ನಂಬಿಕೆಯು ಆದಿಕಾಂಡ 1:1ರಲ್ಲಿ ಅವಲಂಭನೆಗೊಂಡಿದೆ. ಸಹಜವಾಗಿ ಪೂರ್ವಿಕರು, "ಅನೇಕ ದೇವತೆಗಳು" ಲೋಕವನ್ನು ಸೃಷ್ಟಿ ಮಾಡಿದವು ಎಂದು ನಂಬುತ್ತಾರೆ. ಆ ದೇವತೆಗಳ ನಡುವೆ ಜರುಗಿದ ಯುದ್ಧದ ನಿಮಿತ್ತ ನಾವು ಕಾಣುವ ಜಗತ್ತು ಅಸ್ತಿತ್ವಕ್ಕೆ ಬಂದಿತ್ತು ಎಂಬುದಾಗಿ ಕೆಲವರು ವಿವರಿಸಿದ್ದಾರೆ.

ಆದರೆ ದೇವರು ಒಬ್ಬನೇ ಎಂದು, ವಿಶ್ವವನ್ನು ಆತನೇ ಸೃಷ್ಟಿಸಿರುವನು ಎಂದು ಆದಿಕಾಂಡ ತಿಳಿಸುತ್ತದೆ. ಸಕಲಕ್ಕೂ ದೇವರೇ ಮೂಲ ಎಂದು ಆದಿಕಾಂಡ 1 ಹಾಗೂ 2 ತಿಳಿಸುತ್ತದೆ. ಉದಾಹರಣೆಗೆ: 1:1-19 ಸಕಲವನ್ನು ಹಾಗೂ ಸಸ್ಯ ವರ್ಗವನ್ನು ಸೃಷ್ಟಿಸಿದನು ಎಂದು ತಿಳಿಸುತ್ತದೆ. 1:20-25 ರಲ್ಲಿ, ಪ್ರಾಣಿ ಸಂಕುಲದ ಸೃಷ್ಟಿ ಇದೆ. ಅಂತಿಮವಾಗಿ ಮಾನವನ ಸೃಷ್ಟಿಯನ್ನು ತಿಳಿಸಲಾಗಿದೆ (1:26-30; 2:4-25). "ದೇವರಿಲ್ಲದೆ ಯಾವುದೂ ಉಂಟಾಗಲಿಲ್ಲ" ಎಂಬ ಸಂದೇಶವು ಸ್ಪಷ್ಟವಾಗಿದೆ!

ಅದೇ ವಿಧದಲ್ಲಿ, ಸೃಷ್ಟಿಯಲ್ಲಿ ದೇವರ ಗುಣದ ವೈಶಿಷ್ಟವನ್ನು ಕಾಣುತ್ತೇವೆ. ಆ ಗುಣಗಳ ವಿವರಣೆಗಳನ್ನು ಈ ಅಧ್ಯಾಯಗಳಲ್ಲಿ ನೀಡಿರುವದಿಲ್ಲ; ಆದರೆ ಅವುಗಳ *ನಿದರ್ಶನವನ್ನು* ಕಾಣಬಹುದಾಗಿದೆ. ದೇವರ ಸೃಷ್ಟಿಯಲ್ಲಿ, ಆತನ ಗುಣಗಳನ್ನು ಕಾಣಬಹುದಾಗಿದೆ. ತರುವಾಯ ಸತ್ಯವೇದದಲ್ಲಿ, ಮನುಷ್ಯನು ತಾನು ಮಾಡುವ ಕ್ರಿಯೆಗಳ ಮೂಲಕ, ಅವನ ಸ್ವಭಾವವನ್ನು ಅರಿಯಬಹುದು ಎಂದು ಯೇಸು ತಿಳಿಸಿರುವನು (ಮತ್ತಾಯ 7:15-20). ದೇವರ ವಿಷಯದಲ್ಲೂ ಇದು ಸತ್ಯವೇ ಆಗಿದೆ.

**ಶಕ್ತಿ**

ಉದಾಹರಣೆ: ಸೃಷ್ಟಿಯಲ್ಲಿ ದೇವರ ಪ್ರಭಾವವನ್ನು ಕಾಣುತ್ತೇವೆ. ಕೇವಲ "ಮಾತುಗಳಿಂದಲೇ" ಆತನು ಸಕಲವನ್ನು ಸೃಷ್ಟಿಸಿರುವನು. ಆತನ ಮಾತುಗಳು ಪರಿಣಾಮಕಾರಿ ಆಗಿವೆ; ಆತನು ಸರಳವಾಗಿ ಏನನ್ನಾದರು ಹೇಳಿದರೆ, ಅದು ನೆರವೇರುತ್ತದೆ. ಕೀರ್ತನೆ 33:6ರಲ್ಲಿ ಈ ಸತ್ಯದ ಪ್ರತಿಧ್ವನಿಯನ್ನು ನೋಡುತ್ತೇವೆ. "ಯೆಹೋವನ ಅಪ್ಪಣೆಯಿಂದಲೇ ಆಕಾಶವು ಉಂಟಾಯಿತು; ಅದರಲ್ಲಿರುವದೆಲ್ಲವೂ ಆತನ ಶ್ವಾಸದಿಂದ ನಿರ್ಮಿತವಾಯಿತು" ಯೆಶಾಯ 55:10, 11 ರಲ್ಲಿ,

> ಮಳೆಯೂ ಹಿಮವೂ ಆಕಾಶದಿಂದ ಬಿದ್ದು ಭೂಮಿಯನ್ನು ತೋಯಿಸಿ ಹಸರುಗೊಳಿಸಿ ಫಲಿಸುವಂತೆ ಮಾಡಿ ಬಿತ್ತುವವನಿಗೆ ಬೀಜವನ್ನು, ಉಣ್ಣುವವನಿಗೆ ಆಹಾರವನ್ನು ಒದಗಿಸಿದ ಹೊರತು ಹೇಗೆ ಆಕಾಶಕ್ಕೆ ಸುಮ್ಮನೆ ಹಿಂದಿರುಗುವದಿಲ್ಲವೋ ಹಾಗೆಯೇ ನನ್ನ ಬಾಯಿಂದ ಹೊರಟ ಮಾತು ನನ್ನ ಇಷ್ಟಾರ್ಥವನ್ನು ನೆರವೇರಿಸಿ ನಾನು ಉದ್ದೇಶಿಸಿದ್ದನ್ನು ಕೈಗೂಡಿಸಿದ ಹೊರತು ನನ್ನ ಕಡೆಗೆ ವ್ಯರ್ಥವಾಗಿ ಹಿಂದಿರುಗುವದಿಲ್ಲ .

ದೇವರ ಈ ವಿಚಾರವನ್ನು ನಾವು ಒಂದು ಸಾರಿ ಅರಿತ ನಂತರ, ದೇವರು ಮಾತನಾಡುವಾಗ, ನಾವುಗಳು ಸಹ ಕೇಳಬೇಕು ಎಂಬ ಅರಿವನ್ನು ಹೊಂದಬೇಕು.

**ಜ್ಞಾನ**

ಆದಿಕಾಂಡ 1-3ರಲ್ಲಿ, ನಾವು ದೇವರ ಅಪರಿಮಿತವಾದ *ಜ್ಞಾನವನ್ನು* ಕಲಿಯುತ್ತೇವೆ. 1 ನೇ ಅಧ್ಯಾಯವನ್ನು ಓದುವಾಗ, ದೇವರು ಸೃಷ್ಟಿಗೆ ನೀಡಿರುವ ಆಜ್ಞೆಯಲ್ಲಿ ಇರುವ

ಆಕಾರವನ್ನು ಗಮನಿಸುತ್ತೇವೆ. ಆದಿಕಾಂಡ 1:2ರಲ್ಲಿ, ಶೂನ್ಯಕ್ಕೆ ದೇವರು ನೀಡಿದ ಕ್ರಮವಾದ ಆಕಾರವನ್ನು ನೋಡುತ್ತೇವೆ. ನಿರ್ಜೀವ ಜಡದಿಂದ, ಸಸ್ಯವರ್ಗವನ್ನು, ಪ್ರಾಣಿವರ್ಗವನ್ನು ಅಂತಿಮವಾಗಿ ಮಾನವರನ್ನು ದೇವರು ನಿರ್ಮಿಸಿದನು. ಸೃಷ್ಟಿಯು "ಅಕಸ್ಮಿಕವಾಗಿ ಉಂಟಾಗಲಿಲ್ಲ," ಆದರೆ ಕ್ರಮವಾಗಿಯೂ, ಅರ್ಥಗರ್ಭಿತವಾಗಿಯೂ ಉಂಟಾಗಿವೆ. ನಾವು ಜೀವಿಸಿರುವ ಈ ಲೋಕದಲ್ಲಿ ವಿನ್ಯಾಸಗಾರನ ಪ್ರತಿಭಾ ಶಕ್ತಿಯನ್ನು ಕಾಣುತ್ತೇವೆ. ಹೀಗಿದ್ದರೂ, ವಿಶ್ವವು ಆಕಸ್ಮಿಕವಾಗಿ ಸೃಷ್ಟಿಯಾಯಿತು ಎಂಬ ತತ್ವವು ತದ್ವಿರುದ್ಧವಾಗಿರುತ್ತದೆ!

ಅನೇಕ ವರ್ಷಗಳ ಹಿಂದೆ, ನಾವು ಟೆಕ್ಸಸ್‌ನಲ್ಲಿ ವಾಸಿಸಿರುವಾಗ, ವಾರ್ಷಿಕವಾಗಿ, ಮೆಕ್ಸಿಕೋದ ಕಡೆಗೆ ವಲಸೆ ಹೋಗುವ ಚಿಟ್ಟೆಗಳನ್ನು ನೋಡುವ ಒಂದು ಅವಕಾಶವು ನನಗೆ ದೊರಕಿತು. ಉತ್ತರ ಅಮೇರಿಕೆಯಿಂದ ಮೆಕ್ಸಿಕೋದ ಕಡೆಗೆ ದೊಡ್ಡ ಚಿಟ್ಟೆಗಳು ಹಾರಿ, ಒಂದು ಎಕರೆಯಷ್ಟಿರುವ ಸ್ಥಳದಲ್ಲಿ ಒಟ್ಟಾಗಿ ಸೇರಿ ಬರುತ್ತವೆ. ಇದಕ್ಕೆ ಕಾರಣವನ್ನು ಯಾರೂ ಸಹ ಹುಡುಕಲು ಸಾಧ್ಯವಾಗಿರುವದಿಲ್ಲ (ಕೆಲವರು ಪ್ರಯತ್ನಿಸಿದರೂ), ಮಿಲಿಯಾಂತರ ಚಿಟ್ಟೆಗಳು ಎಲ್ಲಿಗೆ ಹೋಗಬಹುದು ಎಂದು ಜನರು ಯೋಚಿಸುವಾಗಲೇ, ಅವುಗಳು ಮೆಕ್ಸಿಕೋದ ಅನಿರ್ದಿಷ್ಟವಾದ ಸ್ಥಳದಲ್ಲೇ ಬೀಡು ಬಿಡುತ್ತವೆ. ಒಂದು ವೇಳೆ ದೇವರು ಇಲ್ಲದಿದ್ದರೆ, ಈ ಕಾರ್ಯ ಹೇಗೆ ನಡೆಯುತ್ತದೆ ಎಂದು ಒಬ್ಬನು ಆಶ್ಚರ್ಯಪಡಬಹುದು. ಸರಿಯಾದ ಸಮಯಕ್ಕೆ ಒಂದೆಡೆ ಒಟ್ಟಾಗಿ ಸೇರಿ, ಇನ್ನೊಂದೆಡೆಗೆ ಹೋಗಬೇಕು ಎಂದು ಅವುಗಳು ಹೇಗೆ "ತಿಳಿಯಲು" ಸಾಧ್ಯ? ಆದಿಯಿಲ್ಲದ ಒಂದು "ಪ್ರಮುಖವಾದ ಚಿಟ್ಟೆಯು" ಆ ಸ್ಥಳಕ್ಕೆ ಪ್ರಯಾಣ ಮಾಡಿ, ಹಿಂದಿರುಗಿ ಬಂದು ಇತರ ಚಿಟ್ಟೆಗಳಿಗೆ ತಿಳಿಸಿತು ಎಂದು ನಾವು ಊಹಿಸಿಕೊಳ್ಳಬಹುದೇ? ಪ್ರತಿ ವರ್ಷವು ಅವುಗಳು ಆಕಸ್ಮಿಕವಾಗಿ ಅಲ್ಲಿಗೆ ಬಂದು ಸೇರುತ್ತವೆ ಎಂದು ತಿಳಿಯಬಹುದೇ? ಆದರೆ ದೇವರು ತಾನೇ ಈ ಸೂಕ್ಷ್ಮವಾದ ಜೀವಿತಗಳನ್ನು ಉಂಟುಮಾಡಿ, ಅವುಗಳು ಈ ವಿಧದಲ್ಲಿ ಇರಬೇಕೆಂದು ಅವುಗಳಿಗೆ ಕ್ರಮವನ್ನು ನೀಡಿದ್ದಾನೆ ಎಂದು ಒಪ್ಪಿಕೊಳ್ಳುವದು ಸಕಾರಣವಲ್ಲವೇ. ಇಂಥಹ ಸೃಷ್ಟಿ ಕರ್ತನು ಅಪರಿಮಿತವಾದ ಜ್ಞಾನವನ್ನು ಹೊಂದಿದ್ದಾನೆ.

**ಸದ್ಗುಣ**

ಈ ಅಧ್ಯಾಯಗಳು ದೇವರ ಸದ್ಗುಣಗಳಿಗೆ ಸಾಕ್ಷಿಗಳಾಗಿವೆ. ಅಧ್ಯಾಯ 1ರ ಅಂತ್ಯದಲ್ಲಿ, "ದೇವರು ಉಂಟು ಮಾಡಿದ್ದೆಲ್ಲವೂ ಬಹು ಒಳ್ಳೇಯದಾಗಿತ್ತು ಎಂದು ನೋಡುತ್ತೇವೆ" (1:31ಎ). ದೇವರ ಸೃಷ್ಟಿಯಲ್ಲಿ, ಆತನ ಸದ್ಗುಣವು ಪ್ರಚಲಿತವಾಗಿವೆ. ಇದು ನಮಗೆ ಅದ್ಭುತವಾದ ಸುದ್ದಿಯಲ್ಲವೇ! ದೇವರು ಒಳ್ಳೆಯವನು ಅಥವಾ ಕೆಟ್ಟವನು, ಆತನು ಪ್ರೀತಿಸುತ್ತಾನೆ ಅಥವಾ ಪ್ರೀತಿಸುವದಿಲ್ಲ, ಆತನು ಆಶೀರ್ವಾದವನ್ನು ಅಥವಾ ನಾಶನ ಉಂಟುಮಾಡುವವನು ಎಂದು ತಿಳಿಯುವ ಅಗತ್ಯವಿರುವದಿಲ್ಲ.

ಸತ್ಯವೇದದ ಮುಂದಿನ ಅಧ್ಯಾಯಗಳಲ್ಲಿ ದೇವರ ಸದ್ಗುಣವು ಹರಿದು, ಆತನು ಸೃಷ್ಟಿಸುವದರಲ್ಲಿ, ಪೋಷಿಸಿರುವದರಲ್ಲಿ, ಹಾಗೂ ತಾನು ಉಂಟು ಮಾಡಿದ ಲೋಕವನ್ನು ಆಶೀರ್ವಾದ ಮಾಡುವದನ್ನು ಗಮನಿಸುತ್ತೇವೆ.

## ಮನುಷ್ಯಕುಲ

ಆದಿಕಾಂಡದಲ್ಲಿರುವ ಮಾನವನ ಸೃಷ್ಟಿಯು ಒಂದು ವಿಷಯವಾಗಿರದೆ, ದೇವರ ಜೊತೆಗಿನ ಸಂಬಂಧದ ಕುರಿತಾಗಿರುತ್ತದೆ. ಮೊದಲನೆಯದಾಗಿ ವ್ಯಾಖ್ಯಾನವಾಗಿರುವ "ಮನುಷ್ಯ" ಎಂಬ ಪದದಲ್ಲಿ (ಇಬ್ರಿಯ ಅದಾಮ) ಗಂಡು ಮತ್ತು ಹೆಣ್ಣು ಜಾತಿಗಳು ಅಡಕವಾಗಿವೆ - 1:26ಎ ಯಲ್ಲಿ, "ಆ ಮೇಲೆ ದೇವರು, ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ" ಎಂದು ಬರೆದದೆ.

ಈ ಪದಗಳಲ್ಲಿ "ಮನುಷ್ಯನನ್ನು" ಕುರಿತು ಮಾತ್ರ, ಅಂದರೆ ಈ ಸೃಷ್ಟಿಯನ್ನು ಮಾತ್ರ

ಆತನ "ಸ್ವರೂಪದಲ್ಲಿ" ಉಂಟುಮಾಡಲಾಗಿದೆ ಎಂದು ಹೇಳಲಾಗಿದೆ. ಅಂದರೆ ಮನುಷ್ಯನ ರೂಪವು ದೇವರ ರೂಪದಂತೆಯೇ ಇದೆ ಎಂದು ಭಾವಿಸಬಹುದೇ? ದೇವರ ಸ್ವರೂಪದಂತೆ ಅಂದರೆ, "ದೇವರ ಸ್ವಂತ ಸ್ವಭಾವವನ್ನು ತಿಳುವಳಿಕೆಯನ್ನು ಸೃಷ್ಟಿಮಾಡುವ ಕೌಶಲ್ಯವನ್ನು ಹಾಗೂ ಪ್ರೀತಿಸುವ ಸಾಮರ್ಥ್ಯವನ್ನು ಹೊಂದಿರುವವನು" ಎಂಬ ಅರ್ಥವಾಗಿದೆ. "ಮಾನವನು" ಪ್ರಾಣಿಗಿಂತ, ಬುದ್ಧಿವಂತನು ಎಂಬ ಪ್ರಚಲಿತ ಹೇಳಿಕೆಗೆ ತದ್ವಿರುದ್ಧವಾಗಿರುತ್ತದೆ, ಮನುಷ್ಯನು ವಿರಸನ ತತ್ವದಲ್ಲಿ ಮೊದಲಿಗನು ಎಂಬ ಪ್ರಚಲಿತ ಹೇಳಿಕೆಯಾಗಿದೆ (ಚಿಂಪಾಂಜಿಗಳು ಮನುಷ್ಯನಿಗೆ ಹತ್ತಿರವಾದ ಜೀವಿಗಳು ಎಂದು ಪರಿಗಣಿಸಲೇಬೇಕು ಎಂದು ಒಬ್ಬ ಸಂಶೋಧಕನು ತಿಳಿಸಿರವನು). ವಚನ 26ರ ನಂತರದ ವಾಕ್ಯಗಳಲ್ಲಿ ಮುಂದುವರಿಸಲಾಗಿದೆ: "ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ, ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ ಅಂದನು." ದೇವರ ಸಾರೂಪ್ಯದಲ್ಲಿ ನಿರ್ಮಾಣವಾಗಿರುವದರಿಂದ, ಭೂಮಿಯ ಮೇಲೆ ಮಾನವನು ದೇವರೊಂದಿಗೆ ಸಹ ಆಡಳಿತವನ್ನು ಹೊಂದಿರುವನು, ಸಸ್ಯ ಜಾತಿ ಹಾಗೂ ಪ್ರಾಣಿಗಳ ಮೇಲೆ ಒಡೆತನವನ್ನು ಹೊಂದಿರುವನು ಎಂಬುದು ಸಹಜ ಸಂಗತಿಯಾಗಿರುತ್ತದೆ. ನಂತರದ 28 ರಿಂದ 30 ವಚನದವರೆಗೆ ಇದನ್ನು ಮುಂದುವರೆಸಿ, "ನೀವು ಭೂಮಿಯಲ್ಲಿ ತುಂಬಿಕೊಂಡು ಅದನ್ನು ವಶಮಾಡಿಕೊಳ್ಳಿರಿ." ದೇವರ ಸೃಷ್ಟಿಯ ಮೇಲೆ ಸಕಲ ಆಡಳಿತವನ್ನು ಮಾನವನು ಹೊಂದಿರುವದಿಲ್ಲ, ಆದರೆ ದೇವರ ಸಹ ಒಡೆಯನಾಗಿದ್ದಾನೆ. ದೇವರ ಸೃಷ್ಟಿಯಲ್ಲಿ ಅಧಿಕಾರ ಹಾಗೂ ಜವಾಬ್ದಾರಿಯನ್ನು ಹೊಂದಿದ್ದೇವೆ. ಅದು ನಮ್ಮ ಪ್ರಯೋಜನಕ್ಕಾಗಿ ಇದೆಯೇ ವಿನಃ ನಾಶನಕ್ಕಾಗಿ ಇರುವುದಿಲ್ಲ. ದೇವರ ಸಾರೂಪ್ಯದಲ್ಲಿ ಮಾನವನು ನಿರ್ಮಾಣವಾಗಿರುವದರಿಂದ ಇತರೆ ಸೃಷ್ಟಿಗಳಿಗಿಂತ ಅವನು ವಿಭಿನ್ನವಾಗಿರುವನು. ಈ ಸತ್ಯದಲ್ಲಿ "ಸೃಷ್ಟಿಯ ಆರಾಧನೆಯನ್ನು" ನಿರಾಕರಿಸಲಾಗಿದೆ. ಅದು ಈಗ ಪ್ರಚಲಿತವೂ ಆಗಿದೆ (ಪೂರ್ವಿಕರು ಮಾತ್ರ ಅದನ್ನು ಮಾಡುತ್ತಿದ್ದರು). ಭೂಮ್ಯಾಕಾಶಗಳು ನಮ್ಮ "ತಂದೆ" "ತಾಯಿ" ಅವರುಗಳು ದೇವರ ಸೃಷ್ಟಿಯ ಒಂದು ಭಾಗ, ಅದನ್ನು ನಾವು ದೊರೆತನ ಮಾಡುತ್ತೇವೆ, ದೇವರ ಪರವಾಗಿ ಅದರ ಮೇಲೆ ಆಡಳಿತ ಮಾಡುತ್ತೇವೆ.

ಆದಿಕಾಂಡ 2ರಲ್ಲಿ, ಮಾನವ ಸೃಷ್ಟಿಯ "ವಿಶೇಷವಾದ" ಇನ್ನೊಂದು "ಮಗ್ಗುಲನ್ನು" ಗಮನಿಸುತ್ತೇವೆ. ಮನುಷ್ಯನನ್ನು ದೇವರು ವೈಯಕ್ತಿಕವಾಗಿ ತಾನೇ ಬಂದು ಉಂಟುಮಾಡಿರುವನು: "ಹೀಗಿರಲು ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು" (ಆದಿಕಾಂಡ 2:7). ಇತರೆ ಯಾವುದೇ ಜೀವಿಗಳನ್ನು ಇಷ್ಟೊಂದು ಅಕ್ಕರೆಯಿಂದ ಉಂಟುಮಾಡಿರುವದಿಲ್ಲ. ಉಳಿದವುಗಳನ್ನು ಕೇವಲ ಬಾಯಿ ಮಾತಿನಿಂದ ಉಂಟುಮಾಡಲಾಗಿದೆ. ಮಾನವನು ದೇವರ ಶ್ವಾಸದಿಂದ ನೇರವಾಗಿ ಉಂಟುಮಾಡಲಾಗಿದೆ.

ದೇವರೊಂದಿಗಿನ ಹಾಗೂ ಇತರರೊಂದಿಗಿನ ಅನ್ಯೋನ್ಯತೆಯಲ್ಲಿ ಆನಂದ ಪಡುವ ಉದ್ದೇಶದಿಂದ ಮಾನವನನ್ನು ನಿರ್ಮಿಸಲಾಗಿದೆ ಇಂತಹ ಅವಕಾಶವನ್ನು ಇತರೆ ಸೃಷ್ಠಿಗಳಿಗೆ ನೀಡಲಾಗಿರುವದಿಲ್ಲ 2:7ರಲ್ಲಿ ದೇವರು ಮನುಷ್ಯನಿಗೆ ಆಜ್ಞೆಯನ್ನು ಹಾಗು ಮಿತಿಯನ್ನು ನೀಡಿದ್ದರಿಂದ, ಇದರಲ್ಲಿರುವ ಅನನ್ಯ ಅನ್ಯೋನ್ಯತೆಯನ್ನು ಗಮನಿಸಬಹುದು. ಅವರು ದೇವರೊಂದಿಗೆ ಅನ್ಯೋನ್ಯತೆಯಲ್ಲಿ ಇರಬೇಕಾದ ಅಗತ್ಯತೆ ಇದದ್ದರಿಂದ, ಅದರ ನಿಯಮಗಳನ್ನು ಅವರು ಅರಿಯಬೇಕಿತ್ತು. ಅಥೇನೆಯಲ್ಲಿ ಪೌಲನು ನೀಡಿದ ದೇವರ ಮತ್ತು ಮಾನವನ ಸಂಬಂಧದ ಪ್ರಸಂಗದಂತೆ:

> ಜಗತ್ತನ್ನೂ ಅದರಲ್ಲಿರುವ ಎಲ್ಲಾ ವಸ್ತುಗಳನ್ನೂ ಉಂಟು ಮಾಡಿದ ದೇವರು ಭೂಮ್ಯಾಕಾಶಗಳ ಒಡೆಯನಾಗಿರುವದರಿಂದ ಆತನು ಕೈಯಿಂದ ಕಟ್ಟಿರುವ ಗುಡಿಗಳಲ್ಲಿ

> ವಾಸಮಾಡುವವನಲ್ಲ; ತಾನೇ ಎಲ್ಲರಿಗೂ ಜೀವಶ್ವಾಸ ಮುಂತಾದದ್ದೆಲ್ಲವನ್ನೂ ಕೊಡುವವನಾಗಿರಲಾಗಿ ಕೊರತೆಯಿದ್ದವನಂತೆ ಮನುಷ್ಯರ ಕೈಗಳಿಂದ ಸೇವೆ ಹೊಂದುವವನೂ ಅಲ್ಲ. ಆತನು ಒಬ್ಬನಿಂದಲೇ ಎಲ್ಲಾ ಜನಾಂಗದವರನ್ನು ಹುಟ್ಟಿಸಿ ಅವರವರು ಇರತಕ್ಕ ಕಾಲಗಳನ್ನೂ ಅವರವರ ನಿವಾಸಗಳ ಮೇರೆಗಳನ್ನೂ ನಿಷ್ಕರ್ಷಿಸಿ ಭೂಮಂಡಲದಲ್ಲೆಲ್ಲಾ ವಾಸ ಮಾಡಿಸಿ ಒಂದು ವೇಳೆ ಅವರು ತಡವಾಡಿ ಕಂಡುಕೊಂಡಾರೇನೋ *ಎಂದು ತನ್ನನ್ನು ಹುಡುಕುವವರನ್ನಾಗಿ ಮಾಡಿದನು. ಆತನು ನಮ್ಮಲ್ಲಿ ಒಬ್ಬನಿಗೂ ದೂರ ವಾದವನಲ್ಲ* ... (ಅಪೊಸ್ತಲರ ಕೃತ್ಯಗಳು 17:24-27; ಒತ್ತಿ ಹೇಳಿದ್ದು ನನ್ನದು).

ಪೌಲನು ಆದಿಕಾಂಡದ ವಾಕ್ಯವನ್ನು ದೃಢೀಕಸಿ: ನಾವುಗಳು ನಮ್ಮ ನಿರ್ಮಾಣಿಕನಾದ ದೇವರೊಂದಿಗಿನ ಸಂಬಂಧಕ್ಕಾಗಿ ಸೃಷ್ಟಿಸಲ್ಪಟ್ಟೆವು ಎಂದಿರುವನು. ಆ ಸಂಬಂಧವು ಸ್ಥಾಪನೆಗೊಳ್ಳುವವರೆಗೆ, ನಮ್ಮ ಜೀವಿತದಲ್ಲಿ ಸಂಪೂರ್ಣತೆಯನ್ನು ನಾವು ಕಾಣುವದಿಲ್ಲ. ಈ ಪ್ರಾಥಮಿಕ ಸತ್ಯವನ್ನೇ ಸತ್ಯವೇದವು ತಿಳಿಸುತ್ತದೆ.

ನಾವು ಪರಸ್ಪರ ಅನ್ಯೋನ್ಯತೆಯಲ್ಲಿ ಇರಬೇಕೆಂತಲೂ ಸಹ ದೇವರು ನಮ್ಮನ್ನು ನಿರ್ಮಾಣ ಮಾಡಿದ್ದಾನೆ ಆದಿಕಾಂಡ 2:18ರಲ್ಲಿ: "ಯೆಹೋವ ದೇವರು - ಮನುಷ್ಯನು ಒಂಟಿಗನಾಗಿರಬಾರದೆಂದು, ಅವನಿಗೆ ಸರಿ ಬೀಳುವ ಸಹಕಾರಿಣಿಯನ್ನು ಉಂಟುಮಾಡುವೆನು ಅಂದನು." ಆಕೆಯು ಅವನಿಗೆ ಸಹಾಯವು ಸಹಕಾರಿಣಿಯು ಮತ್ತು ಹೊಂದಾಣಿಕೆಯಿಂದ ಅವನ ಜೀವಿತದಲ್ಲಿ ಒಂದಾಗಿಯೂ ಇರಬೇಕಿತ್ತು (ಆದ್ದರಿಂದ ದೇವರು "ಸಹಕಾರಿಣಿಯನ್ನು" ಉಂಟು ಮಾಡಿದನು. "ಸಹಕಾರಿ" ಎಂಬುದು ಕೀಳುಮಟ್ಟದ ಪದವಲ್ಲ. ದೇವರು ನಮಗೆ ಸಹಾಯಕನು ಎಂಬ ಒಂದೇ ಪದವನ್ನು ಇಲ್ಲಿ ಬಳಸಲಾಗಿದೆ ಕೀರ್ತನೆ 30:10). ವಚನ 19 ರಿಂದ 25ರವರೆಗೆ, ದೇವರು ಸ್ತ್ರೀಯನ್ನು ನಿರ್ಮಾಣಮಾಡಿ, ಆದಾಮನ ಬಳಿಗೆ ಕರೆ ತಂದನು ಎಂದು ನೋಡುತ್ತೇವೆ. ಈಗಾಗಲೇ ಅದಾಮನು ಸಕಲ ಪ್ರಾಣಿಗಳ ಅಧ್ಯಯನ ಮಾಡಿ, ಅವುಗಳಿಗೆ ತಕ್ಕ ಹೆಸರನ್ನು ನೀಡಿದ್ದರೂ, ತನಗೆ ತಕ್ಕ ಸಂಗಾತಿ ದೊರೆಯದೆ ಇದ್ದದರಿಂದ ಅವನು ಏಕಾಂಗಿಯಾಗಿದ್ದನು. ದೇವರು ಅವನ ಬಳಿಗೆ ಸ್ತ್ರೀಯನ್ನು ಕರೆ ತಂದಾಗ, ಅವನು ಆನಂದಗೊಂಡನು, ಈಗ ಸರಿ ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬು ನನ್ನ ಮಾಂಸದಿಂದ ಬಂದ ಮಾಂಸವೂ ಆಗಿದ್ದಾಳೆ ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರಿ ಎನಿಸಿಕೊಳ್ಳುವನು ಅಂದನು (2:23). ಈಗ ಅವನು ತನಗೆ ತಕ್ಕ ಜೊತೆಗಾರ್ತಿಯನ್ನು ಕಂಡುಕೊಂಡನು, ಈಗ ಅವಳೊಂದಿಗೆ ಅವನು ಅನ್ಯೋನ್ಯವಾಗಿ ಜೀವಿಸಲು ಸಾಧ್ಯವಾಯಿತು.

ಆದಿಕಾಂಡ 1-3 ಹಾಗೆಯೇ ದೇವರು ನಮ್ಮ ನಿರ್ಮಾಣಿಕನಾಗಿರುವದರಿಂದ ನಮಗೆ ಅಪ್ಪಣೆಯನ್ನು ಹಾಗೂ ತೀರ್ಪನ್ನು ನೀಡುವ ಅಧಿಕಾರವನ್ನು ಹೊಂದಿರುವನು (ನಾವು ಹೊಣೆಗಾರರು) ನಾವು ಆತನ ಆಜ್ಞೆಗಳನ್ನು ಪಾಲಿಸುವೆವೋ ಅಥವಾ ಅಲಕ್ಷಮಾಡುವೆವೋ ಎಂದು ಆದಿಕಾಂಡ 2:15-17ರಲ್ಲಿ ತಿಳಿಯುತ್ತೇವೆ:

> ಯೆಹೋವದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು. ಇದಲ್ಲದೆ ಯೆಹೋವ ದೇವರು ಆ ಮನುಷ್ಯನಿಗೆ-ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ ಎಂದು ವಿಧಿಸಿದನು.

ಈ ವಾಕ್ಯಭಾಗದಲ್ಲಿ ಆಜ್ಞೆ ಹಾಗೂ ಪಾಲನೆಗೆ ಒಳಪಟ್ಟ ಅಂಶಗಳಿವೆ ದೇವರು ಕೇವಲವಾದ ಸಲಹೆಗಳನ್ನು ನೀಡುವುದಿಲ್ಲ. ಆತನು ಕೇವಲ ನಮ್ಮ

ವೈಯಕ್ತಿಕವಾದ ಆನಂದವನ್ನು ಸ್ವ ಇಷ್ಟವನ್ನು ನೆರವೇರಿಸುವ ವೈದ್ಯನಲ್ಲ. ಆತನು ನಮ್ಮ ಸೃಷ್ಟಿಕರ್ತನಾಗಿರುವದರಿಂದ, ಆತನ ಆಜ್ಞೆಗಳಿಗೆ ನಾವು ಪ್ರತಿಕ್ರಿಯಿಸಲೇಬೇಕು.

ದೇವರು ತನ್ನ ಹೋಲಿಕೆಯಲ್ಲಿ ನಮ್ಮನ್ನು ನಿರ್ಮಾಣ ಮಾಡಿರುವದಾದರು, ಮಾನವರು ಮಾತ್ರ ದೇವರಿಗೆ ವಿರುದ್ಧವಾಗಿ ನಡಕೊಳ್ಳುವ ಸ್ವಭಾವದವರಾಗಿದ್ದಾರೆ. ಇದು ಭೌಗೋಳಿಕ ವಾದ ಸಮಸ್ಯೆಗೆ ಮೂಲವಾಗಿದೆ - ಅದು ಪಾಪವೇ.

## ಪಾಪ

ದೇವರು ಆಜ್ಞೆಯನ್ನೂ ಎಚ್ಚರಿಕೆಯನ್ನೂ ನೀಡುವ ಮೂಲಕ ಪಾಪವನ್ನು ನಿಗ್ರಹಿಸಲು ಪ್ರಯತ್ನಿಸಿದನು. "ನೀನು ತಿಂದರೆ ಸಾಯುವಿ." ದೇವರು ಖಂಡಿಸಿ ತೀರ್ಪು ನೀಡುವವನು ಎಂದು ತಿಳಿಯುವಾಗ, ದೇವರು ತೀರ್ಪು ಮಾಡುವ ಮೊದಲು ಎಚ್ಚರಿಕೆಯನ್ನು ನೀಡುವನು ಎಂದು ವಾಕ್ಯಗಳಲ್ಲಿ ನೋಡುತ್ತೇವೆ. ಇಸ್ರಾಯೇಲ್ಯರಿಗೆ ತೀರ್ಪುಮಡುವ ಮೊದಲು ದೇವರು, ಪ್ರವಾದಿಗಳ ಮೂಲಕ ಅನೇಕ ವರ್ಷಗಳ ಕಾಲ ಅವರಿಗೆ ಎಚ್ಚರಿಕೆಯನ್ನು ನೀಡಿದನು! "ದುಷ್ಟನ ಸಾವಿನಲ್ಲಿ ದೇವರಿಗೆ ಸಂತೋಷವಿಲ್ಲ" (ಯೆಹೆಜ್ಕೇಲ 33:11). ಆದ್ದರಿಂದ ಪಾಪವನ್ನು ನಿಗ್ರಹಿಸಲು ದೇವರು ಸರಳ ಪ್ರಯತ್ನಗಳನ್ನು ಮಾಡಿದನು. ಆದಾಗ್ಯೂ ದೇವರು ವಾಕ್ಯಗಳಲ್ಲಿ ಎಚ್ಚರಿಕೆಯನ್ನು ಇನ್ನೂ ನೀಡುತ್ತಿರುವನು.

ದೇವರ ಮೇಲೆ ಭರವಸೆ ಇಡದೆ ಇರುವದರಿಂದ ಪಾಪದ ಪರಿಣಾಮ ಉಂಟಾಗುತ್ತದೆ. ಆದಿಕಾಂಡ 3:1-7ರಲ್ಲಿ ಸರ್ಪವು ಸ್ತ್ರೀಯನ್ನು ಶೋಧಿಸಿದ ವಿಚಾರವನ್ನು ನೋಡುತ್ತೇವೆ (ಸೈತಾನ; ಪ್ರಕಟನೆ 12:9), ಅವಳು ಅವನ ವಂಚನೆಗೆ ಒಳಗಾದಳು, ನಂತರ ಅದಾಮನನ್ನು ಸಹ ಪಾಪಕ್ಕೆ ಸೆಳೆದಳು. ಮೊದಲನೆಯದಾಗಿ ಅವಿಧೇಯತೆ ಹಾಗೂ ಮರಣದ ಕುರಿತು ದೇವರು ತಪ್ಪಾಭಿಪ್ರಾಯವನ್ನು ನೀಡಿರುವನು ಎಂದು ಸೈತಾನನು ಪೂರ್ಣವಾಗಿ ನಿರಾ ಕರಿಸಿದನು, ಅದಲ್ಲಿ "ಇಲ್ಲ" ಎಂಬ ಎರಡು ಅಕ್ಷರಗಳನ್ನು ಬಳಸಿರುವನು. ಅದಾಮ, ಹವ್ವರು ಅದ್ಭುತವಾದ ಸಂಗತಿಯನ್ನು ಆನಂದಿಸಲು ದೇವರು ಅಡ್ಡವಾಗಿರುವನು ಎಂದು ಸೈತಾನನು ತಿಳಿಸಿದನು: ಅದು "ಒಳ್ಳೇದರ ಮತ್ತು ಕೆಟ್ಟದರ ಅರಿವು" ಎಂಬುದೇ, ಈ ತಿಳುವಳಿಕೆಯನ್ನು ಆ ಸ್ತ್ರೀ ಪುರುಷರು ಪಡೆಯುವದಾದರೆ, ದೇವರೊಂದಿಗೆ ಪೈಪೋಟಿ ಮಾಡಬಹುದೆಂದು ಅವನು ಊಹಿಸಿದನು.

ವಚನ 6ರಲ್ಲಿ, ನಾಶಕರವಾದ ನಿರ್ಧಾರವನ್ನು ಮಾಡಲಾಯಿತು: "ಆಗ ಆ ಸ್ತ್ರೀಯು ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋ ದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದ್ದದರಿಂದ ಅದನ್ನು ತೆಗೆದುಕೊಂಡು ತಿಂದಳು ..." ತನ್ನ ನಿರ್ಮಾಣಿಕನು ಆಕೆಯ ಮೇಲೆ ಇಟ್ಟಿದ್ದ ಭರವಸಕ್ಕೆ ಧಕ್ಕೆಯನ್ನು ತಂದುಕೊಂಡಳು ಮತ್ತು ದೇವರ ಒಂದು ನಿಯಮವನ್ನು ಮೀರಿದಳು. "ದೇವರಲ್ಲಿ ಭರವಸೆ ಇಡದೆ ಇರುವದೇ ಪಾಪದ ಆರಂಭ" ಎಂದು ಪಾಲ್ R ಹೌಸ್‌ರವರು ಹೇಳಿಕೆ ನೀಡಿರುವರು. "ಇದರಲ್ಲಿ ಒಬ್ಬನನ್ನು ನಾಶಮಾಡುವಂಥದ್ದನ್ನು ಬಯಸುವದು, ಸತ್ಯದ ಪ್ರಕಟನೆಯ ನಿರ್ಲಕ್ಷ್ಯ ಅಡಕವಾಗಿದ್ದು, ಅಂತಿಮವಾಗಿ ನಾಶನ ಉಂಟಾಗುತ್ತದೆ."[1] ಸ್ತ್ರೀ ಪುರುಷರಿಬ್ಬರು ದೇವರಲ್ಲಿ ಭರವಸವಿಡದೆ, ವಂಚಕನ ಸಂಚಿಗೆ ಒಳಗಾದ್ದರಿಂದ, ಅವರು ಅವರ ಸೃಷ್ಟಿ ಕರ್ತನಿಗೆ ಅವಿಧೇಯರಾಗಿ ಪಾಪಭ್ರಷ್ಟರಾದರು.

ದೇವರ ಮತ್ತು ಮಾನವರ ನಡುವಿನ ಸಂಭಂಧಕ್ಕೆ ಮಾತ್ರ ದಕ್ಕೆಯಾಗದೇ, ಆದಿಕಾಂಡ 3:8-13ರ ಪ್ರಕಾರ ಸ್ತ್ರೀ ಪುರುಷರ ನಡುವೆಯ ಸಂಬಂಧಕ್ಕೂ ದಕ್ಕೆ ಉಂಟಾಯಿತು. ದೇವರ ಸನ್ನಿಧಿಗೆ ಆಹ್ವಾನ ಮಾಡಬೇಕಿದ್ದರೂ, ಆ ದಂಪತಿಗಳು ಮರದ ಹಿಂಬಾಗದಲ್ಲಿ ಅಡಿತುಕೊಂಡರು. ಅವರು ಬೆತ್ತಲೆಯಾದ ವಿಚಾರವನ್ನು ದೇವರು ಕೇಳಿದಾಗ, ಆದಾಮನು ಹವ್ವಳನ್ನು ದೂಷಿಸಿದನು - ಪರೋಕ್ಷವಾಗಿ ದೇವರನ್ನೇ ದೂಷಿಸಿದನು - ಅದರ

ಬದಲಾಗಿ ತಾನು ಮಾಡಿದ ಕ್ರಿಯೆಗಾಗಿ, ತಾನು ಹೊಣೆಯನ್ನು ಹೊರಬೇಕಿತ್ತು: "ನನ್ನ ಜೊತೆಯಲ್ಲಿರುವದಕ್ಕೆ ನೀನು ಕೊಟ್ಟ ಸ್ತ್ರೀಯು ಆ ಮರದ ಹಣ್ಣನ್ನು ನನಗೆ ಕೊಟ್ಟಳು; ನಾನು ತಿಂದೆನು" (3:12). ದುಃಖದ ಸಂಗತಿ ಏನೆಂದರೆ, ಅನೇಕ ಜನರು ಇದೇ ವಿಧವಾದ ಜೀವಿತ ವನ್ನು ಜೀವಿಸುತ್ತಿರುವರು: ನಾವು ಅವಿತುಕೊಂಡು ಇತರರನ್ನು ದೂಷಿಸುತ್ತಿದ್ದೇವೆ, ದೇವರ ಹಾಗೂ ಪರಸ್ಪರರ ಸಂಬಂಧದಲ್ಲಿ ಇದನ್ನೇ ಮಾಡುತ್ತಿದ್ದೇವೆ. ವಚನ 11 ರಿಂದ 16ರವರೆಗೆ ಉತ್ತಮವಾದ ಸಂಬಂಧವು ವಿರಳ ಎಂದು ವಿವರಣೆಯನ್ನು ನೀಡಲಾಗಿದೆ. ಸಮಾಧಾನ ಮತ್ತು ಸೌಹಾರ್ದವಿರಬೇಕಾದ ಸ್ಥಳದಲ್ಲಿ, ಗೊಂದಲಗಳು ಸ್ವಾಭಾವಿಕವಾಗಿ ಉದ್ಭವಿಸುತ್ತಿವೆ. ನಾವು ನಮ್ಮ ಸ್ವತಂತ್ರಕ್ಕಾಗಿ ಜೀವಿಸದೇ, ಇತರರ ಸಂಬಂಧಕ್ಕಾಗಿಯೂ ಜೀವಿಸಬೇಕು - ಇಂಥದ್ದನ್ನು ಅನೇಕರು ನಿರಾಕರಿಸಿದ್ದಾರೆ.

ಈ ಘಟನೆಯ ನಿಮಿತ್ತ ಸರ್ಪ ಮನುಷ್ಯ ಹಾಗು ಸ್ತ್ರೀ "ಶಾಪಕ್ಕೆ" ಒಳಗಾದರು ಸೃಷ್ಟಿಗೊಂಡ ಸಂಗತಿಗಳು ಸಹ ಪಾಪದ ಹೊಣೆಯನ್ನು ಹೊರಬೇಕಾಗುತ್ತದೆ, ದೇವರು ಇವುಗಳನ್ನು ಅಲಕ್ಷಿಸುವದಿಲ್ಲ. ನಾವು ಕ್ಷಮಾಪಣೆ ಹೊಂದಿದ್ದರೂ, ದೇವರಿಗೆ ಅವಿಧೇಯರಾದರೆ, ಅದರ ಪರಿಣಾಮವನ್ನು ಯಾವಾಗಲೂ ಎದುರಿಸಬೇಕಾಗುತ್ತದೆ.

ಈ ಕಥೆಯಲ್ಲಿರುವ ಶುಭ ಸಂದೇಶವೇನೆಂದರೆ, ನಾವು ಪಾಪ ಮಾಡಿದ್ದಾಗ್ಯೂ, ದೇವರು ನಮ್ಮನ್ನು ಬಿಟ್ಟುಬಿಡುವದಿಲ್ಲ ಈ ಸತ್ಯವನ್ನು ಆದಿಕಾಂಡದಲ್ಲಿ ತಿಳಿಸಲಾಗಿದೆ. ಆದಿಕಾಂಡ 3:15ರಲ್ಲಿ, ರಕ್ಷಕನ ಆಗಮನ ಚಿತ್ರಣದ ಶುಭ ಸಂದೇಶವನ್ನು ನೀಡಲಾಗಿದೆ. ಮೂಲ ವಾಕ್ಯದಲ್ಲಿ ಇದರ ಕುರಿತು ಸರಳ ವಾಗ್ದಾನವಾಗಿ ತಿಳಿಸಿದ್ದರೂ, ಮುಂದೆ ಈ ಪ್ರಕಟನೆಯ ಸಾರಾಂಶದ ವಿಸ್ತರಣೆಯನ್ನು ನೀಡಲಾಗಿದೆ. "ಈಕೆಯು ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ." ಇದು ಯೇಸುವಿಗೆ ಸೂಚನೆಯಾಗಿದೆ ಎಂದು ಹೊಸ ಒಡಂಬಡಿಕೆಯು ವಿಡಂಬಡನೆ ಮಾಡಿರುತ್ತದೆ - ಆತನು ಸೈತಾನನ ಕಾರ್ಯಗಳನ್ನು ಲಯಮಾಡಿ ಅವನ ತಲೆಯನ್ನು ಜಜ್ಜುವನು, ಇದಕ್ಕಾಗಿ ತನ್ನ ಪ್ರಾಣವನ್ನೇ ಈಡು ಕೊಟ್ಟನು.

ದೇವರು ತನ್ನ ಸೃಷ್ಟಿಗಾಗಿ ಮಾಡಿದ ಮತ್ತೊಂದು ಚಿಂತನೆಯ ಸೂಚನೆಯನ್ನು ಸಹ ಈ ವಾಕ್ಯಭಾಗದಲ್ಲಿ ನೋಡುತ್ತೇವೆ. ಆದಿಕಾಂಡ 3:21ರಲ್ಲಿ, ಯೆಹೋವ ದೇವರು ಅದಾಮನಿಗೂ ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು ಎಂಬುದಾಗಿದೆ. ಇದು ದೇವರ ಕರುಣೆಯ ಸ್ವಭಾವವಾಗಿದೆ. ಬೇಸರಗೊಂಡ ಸೃಷ್ಟಿಕರ್ತನು, ಅವರನ್ನು ನಿರಾಕರಿಸದೆ ಅಥವಾ ನಾಶಮಾಡದೆ, ಅವರ ನಾಚಿಕೆಯನ್ನು ಹಾಗು ಬೆತ್ತಲೆ ತನವನ್ನು ಮುಚ್ಚುವದಕ್ಕಾಗಿ ತಾನೇ ಅಂಗಿಗಳನ್ನು ಮಾಡಿ ಅವರಿಗೆ ತೊಡಿಸಿದನು. ಇದು ಶುಭದ ಆಗಮನವಾಗಿದೆ. ಅದೇ ರೀತಿಯಲ್ಲಿ ವಚನ 22 ರಿಂದ 24ರವರೆಗೆ ಪ್ರೀತಿಯ ಕ್ರಿಯೆಯನ್ನು ಪ್ರಕಟಿಸಲಾಗಿದೆ. ಈ ಭಾಗವನ್ನು ನಾವು ಗಂಭೀರವಾಗಿ ಗಮನಿಸದೆ ಹೋದರೆ, ಈ ಚಿತ್ರಣವನ್ನು ಅರಿತುಕೊಳ್ಳಲಾಗುವದಿಲ್ಲ. ದೇವರು ಆದಾಮ ಹಾಗೂ ಹವ್ವರನ್ನು ತೋಟದಿಂದ ಹೊರಹಾಕಿ, ಜೀವವುಳ್ಳ ಹಣ್ಣನ್ನು ಅವರು ತಿನ್ನದಂತೆ ಅದಕ್ಕೆ ಅಡ್ಡಿ ಮಾಡಿದನು. ಒಂದು ವೇಳೆ ಅವರು ಪಾಪ ಮಾಡದೆ ಇದ್ದಿದ್ದರೆ, ದೇವರೊಂದಿಗೆ ನಿತ್ಯವಾದ ಸೌಹಾರ್ದದಲ್ಲಿ ನಿರಂತರ ವಾಗಿ ಜೀವಿಸಲು ಸಾಧ್ಯವಿತ್ತು. ಪ್ರಪಂಚದಲ್ಲಿ ಹುಟ್ಟಿದ ಪ್ರತಿಪಾಪಿಯು ಇದುವರೆಗೂ ಜೀವಿ ಸುತ್ತಿದ್ದರೆ, ಈ ಪ್ರಪಂಚವು ಈ ವಿಧವಾಗಿ ಇರಲು ಸಾಧ್ಯವಾಗುತ್ತಿರಲಿಲ್ಲ! ದೇವರು ಇದನ್ನು ಆಗಗೊಡಿಸುತ್ತಿರುವದಿಲ್ಲ - ಆದರೆ ಆತನು ಇನ್ನೂ ಪೂರ್ಣಮಾಡಿರುವದಿಲ್ಲ. ಜೀವ ವೃಕ್ಷದ ಮರವು ಇನ್ನೂ ಇರುತ್ತದೆ. ಆದರೆ ಒಳಗೆ ಹೋಗಲು "ಅಡಚಣೆ" ಇದ್ದಾಗ್ಯೂ, ತಿರಿಗೊಮ್ಮೆ ಅದರ ಬಳಿಗೆ ಸಮೀಪಿಸಲು ಅವಕಾಶಮಾಡಲಾಗಿದೆ (ನೋಡಿರಿ ಪ್ರಕಟನೆ 22:1-5), ಈ ದುರ್ಘಟನೆಯನ್ನು ಯೇಸುವಿನಲ್ಲಿ ಮಾರ್ಪಡಿಸಲಾಗಿದೆ. ಪಾಪ ಇರುವದಾದರೂ, ದೇವರು ಅದನ್ನು ಇನ್ನೂ ಹತೋಟಿಯಲ್ಲಿಟ್ಟಿರುವನು, ಅಂತ್ಯದಲ್ಲಿ ಪಾಪಕ್ಕೆ ಜಯವಿರುವದಿಲ್ಲ. ಇದು

ಇನ್ನು ಸಹ ದೇವರ ಲೋಕವೇ ಆಗಿದ್ದು, ನಾವು ಆತನ ಸೃಷ್ಟಿಗಳೇ ಆಗಿರುವೆವು. ಆತನು ನಮ್ಮನ್ನು ಸುಲಭವಾಗಿ ಬಿಟ್ಟು ಬಿಡುವದಿಲ್ಲ.

## ಮುಕ್ತಾಯ

ಸತ್ಯವೇದದ ಉಳಿದ ಭಾಗದಲ್ಲಿ, ಪಾಪಕ್ಕೆ ಪರಿಹಾರದ ಉತ್ತರವನ್ನೇ ನೀಡಲಾಗಿದೆ. ಆ ಉತ್ತರವನ್ನು ಕಂಡುಹಿಡಿಯುವ ಮೊದಲು, ಅದನ್ನು ಪರಿಹಾರ ಮಾಡುವ ವಿಧಾನಗಳನ್ನು ಅರಿಯಬೇಕು. ದೇವರು ನಮ್ಮನ್ನು ಪ್ರೀತಿಯಿಂದಲೂ, ಒಳ್ಳೇಯದಾಗಿಯೂ ನಿರ್ಮಾಣಮಾಡಿ, ಉನ್ನತ ಶಿಖರವನ್ನಾಗಿ ಮಾಡಿರುವನು, ಆದ್ದರಿಂದ ಭರವಸೆಯುಳ್ಳ ಆತನ ವಾಕ್ಯಕ್ಕೆ ವಿಧೇಯತೆಯಿಂದ ನಡಕೊಳ್ಳಬೇಕು. ಹೇಗೂ ನಾವುಗಳು ಪಾಪ ಮಾಡಿರುವದರಿಂದ ಮರಣವು ನಮ್ಮನ್ನು ಹಿಂಬಾಲಿಸುತ್ತದೆ, ಆದಿಕಾಂಡ 1-3 ರ ಪೂರ್ಣ ಪಾಠ ಹೊಂದುವದರೊಳಗಾಗಿ, ನಮ್ಮ ರಕ್ಷಕನಿಗಾಗಿ ನಾವುಗಳು ಹಾತೊರೆಯಬೇಕು.

---

ಟಿಪ್ಪಣೆ

[1]Paul R. House, *Old Testament Theology* (Downer's Grove, Ill.: InterVarsity Press, 1998), 64-65.

---

## "ನಮ್ಮ ಸ್ವರೂಪದಲ್ಲಿ"?

ಆದಿಕಾಂಡ 1:26ರಲ್ಲಿನ ಬಹು ಪದದ ("ನಮ್ಮ" ಮತ್ತು "ನಾವು") ವಿಚಾರವಾಗಿ ಅನೇಕ ಚರ್ಚೆಗಳು ಉಂಟಾಗಿವೆ. ಅದರ ಅರ್ಥವೇನು? ಅಲ್ಲಿ ಒಬ್ಬನೇ ದೇವರು ಇದ್ದದರಿಂದ, ಇತರರು ಇನ್ನೂ ಸೃಷ್ಟಿಯಾಗಿರದೇ ಇದ್ದದರಿಂದ, ಅಲ್ಲಿ ಯಾರ ಕುರಿತಾಗಿ ಈ ಮಾತನ್ನು ಹೇಳಲಾಗಿದೆ? ಒಂದು ವೇಳೆ ಆತನು ದೇವದೂತರೊಂದಿಗೆ ಮಾತನಾಡುತ್ತಿರಬಹುದು, ಯಾಕೆಂದರೆ, ಮಾನವರನ್ನು ಸೃಷ್ಟಿಸುವ ಮೊದಲು, ದೇವರು ದೇವದೂತರನ್ನು ಸೃಷ್ಟಿಸಿರಬಹುದು. ಸತ್ಯವೇದವು ಈ ಕುರಿತು ತಿಳಿಸದೇ ಹೋದರೂ, ಈ ತತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ.

ಒಂದು ವೇಳೆ "ಆತನ ಸಾರ್ವಭೌಮತ್ವದ" ಉದಾಹರಣೆಯು ಇರಬಹುದು, ಅಂದರೆ ಮಾತನಾಡುವವನು ತನ್ನ ಕುರಿತಾಗಿ ಮಾತನಾಡುವಾಗ ಬಹು ಪದವನ್ನು ಬಳಸಿರುವ ಸಾಧ್ಯತೆಗಳಿವೆ: "ನಾನು ಎಂಬುದು ಬಳಕೆಯ ಸಮಾನ್ಯ ಪದವಾಗಿರುತ್ತದೆ. ಒಂದು ವೇಳೆ ತಂದೆ. ಮಗ, ಪರಿಶುದ್ಧಾತ್ಮನ ಕುರಿತು ಕ್ರೈಸ್ತರು ಬಳಸುವ ಹೇಳಿಕೆಯೂ ಇರಬಹುದು. ಮೂರು ವ್ಯಕ್ತಿತ್ವಗಳ ನಡುವಿನ ಸಂಭಾಷಣೆಯೂ ಆಗಿರಬಹುದು" (ಆದಿಕಾಂಡ 1:2 ರಲ್ಲಿ ಸೃಷ್ಟಿ ಮಾಡುವ ಸಂದರ್ಭದಲ್ಲಿ ಪವಿತ್ರಾತ್ಮನಿದ್ದನು, ಯೋಹಾನ 1:3, 10, ಸೃಷ್ಟಿಯ ಸಮಯದಲ್ಲಿ ಕ್ರಿಸ್ತನ ಇರುವಿಕೆಯ ಸೂಚನೆಯೂ ಇರುತ್ತದೆ ಇಬ್ರಿಯ 1:2). ಇದು ಹೊಸ ಒಡಂಬಡಿಕೆಯಲ್ಲಿನ, ದೇವರ ಸ್ವಭಾವದ ಮೂರು ವ್ಯಕ್ತಿತ್ವಗಳಾಗಿವೆ.